# ಭಾರತೀಯ ಖಾಸಗಿ ವಲಯದ ವ್ಯಾಪಾರಿಗಳಿಂದ ಅಕ್ಟೋಬರ್ 2015ರಿಂದ ಜನವರಿ 2016ರ ತನಕ 25ಲಕ್ಷ ಟನ್ ಬೇಳೆಕಾಳು ಆಮದು.

ಭಾರತದ ಖಾಸಗಿ ವಲಯದ ಆಮದುದಾರರು ಅಕ್ಟೋಬರ್ 2015ರಿಂದ ಜನವರಿ 2016ರ ತನಕ 25ಲಕ್ಷ ಟನ್ ಬೇಳೆಕಾಳು ಆಮದು ಮಾಡಿಕೊಳ್ಳಲು ಕರಾರು ಮಾಡಿಕೊಂಡಿದ್ದಾರೆನ್ನಲಾಗಿದೆ. ಇದರಲ್ಲಿ ಈಗಾಗಲೆ 2.5ಲಕ್ಷ ಟನ್ ಬೇಳೆಕಾಳು ಹಿಂದಿನವಾರ ಈಗಾಗಲೇ ಮುಂಬಯಿ ಬಂದರಿಗೆ ಬಂದಿದೆಯೆನ್ನಲಾಗಿದೆ. ಅಗಾಧ ಪ್ರಮಾಣದ ಬೇಳೆಕಾಳು ಆಮದಾಗಲಿರುವುದರಿಂದ ಮುಂದಿನೆರಡು ವಾರಗಳಲ್ಲಿ ಬೇಳೆಕಾಳು ದರಗಳು ಇಳಿಕೆಯಾಗುವ ನಿರೀಕ್ಷೆಯಿದೆಯೆಂದು ಇಂಡಿಯನ್ ಪಲ್ಸಸ್ ಆ್ಯಂಡ್ ಗ್ರೈನ್ಸ್ ಅಸೋಸಿಯೇಶನ್ ಅಧ್ಯಕ್ಷ ಪ್ರವೀಣ್ ಡೋಂಗ್ರೆ ಹೇಳಿದ್ದಾರೆಯೆನ್ನಲಾಗಿದೆ. ಇತ್ತೀಚೆಗಿನ ಕೇಂದ್ರ ಸರಕಾರದ ಬೇಳೆಕಾಳು ಆಮದು ದಾಸ್ತಾನು ಮಿತಿ ನಿರ್ಬಂಧದ ಬಗ್ಗೆ ಮಾತಾನಾಡುತ್ತಾ ಈ ನಿರ್ಧಾರವನ್ನು ಪುನರವಲೋಕಿಸಿ ಕನಿಷ್ಠ 90 ದಿವಸಗಳಿಗೆ ಮುಂದೂಡಬೇಕೆಂದು ಇಂಡಿಯನ್ ಪಲ್ಸಸ್ ಆಂಡ್ ಗ್ರೈನ್ಸ್ ಅಸೋಸಿಯೇಶನ್ (IPGA) ಕೇಂದ್ರ ಸರಕಾರಕ್ಕೆ ಮನವಿ ಮಾಡಿದೆ. ಆಮದಿನಿಂದಾಗಿ ಅಗಾಧ ಪ್ರಮಾಣದ ದಾಸ್ತಾನು ಬಂದರುಗಳಲ್ಲಿರುವ ಸಂಭವದಿಂದಾಗಿ, ಆಮದುದಾರರು ಮಿಲ್ಲರ್ಸ್ ಮತ್ತು ಸಗಟು ವರ್ತಕರು ವಿತರಣೆ ಮಾಡಲು ಅನುಕೂಲವಾಗುವಂತೆ ಅವಕಾಶ ಕಲ್ಪಿಸಿ 90 ದಿವಸಗಳಲ್ಲಿ ದಾಸ್ತಾನು ಮಿತಿಯೊಳಗೆ ತಲುಪಲು ಅನುಕೂಲವಾಗುವಂತೆ ದಾಸ್ತಾನು ಮಿತಿಗೆ ಅವಕಾಶ ಕಲ್ಪಿಸಬೇಕೆಂದು ಅವರು ಮನವಿ ಮಾಡಿದ್ದಾರೆನ್ನಲಾಗಿದೆ. ಇಲ್ಲವಾದಲ್ಲಿ ಬೇಳೆಕಾಳುಗಳ ಆಮದು ಬಾಧಿತವಾಗಿ ದೇಶದಲ್ಲಿ ತೀವ್ರ ಬೇಳೆಕಾಳು ಕೊರತೆಯುಂಟಾಗಬಹುದೆಂದು ಅವರು ಹೇಳಿದ್ದಾರೆನ್ನಲಾಗಿದೆ. ಕೆಲವು ಆಮದುದಾರರು 50000 ಟನ್ ಆಮದು ಕರಾರು ಮಾಡಿದ್ದು, ಅದನ್ನು ಒಂದೋ ರದ್ದು ಮಾಡಬೇಕಾಬಹುದು ಅಥವಾ ಬೇರೆ ರಾಜ್ಯಗಳ ಬಂದರಿಗೆ ಬದಲಾವಣೆ ಮಾಡಬೇಕಾಗಬಹುದು, ಈಗಾಗಲೇ ದಾಸ್ತಾನು ಮಿತಿಯಿಂದಾಗಿ ಮುಂಬಯಿ ಬಂದರಿನಲ್ಲಿ 2.5ಲಕ್ಷ ಟನ್ ಬೇಳೆಕಾಳು ಸ್ಥಗಿತವಾಗಿದೆಯೆಂದು ಡೋಂಗ್ರೆ ಹೇಳಿದ್ದಾರೆನ್ನಲಾಗಿದೆ. ಬೇಳೆಕಾಳು ದರ ಹೆಚ್ಚಳದ ಬಗ್ಗೆ ಚಿಂತಿತರಾಗಿದ್ದೇವೆಯೆಂದು IPGA ಉಪಾಧ್ಯಕ್ಷ ಬಿಮಲ್ ಕೊಠಾರಿ ಹೇಳಿದ್ದಾರೆನ್ನಲಾಗಿದೆ. ಆಸ್ಟ್ರೇಲಿಯಾ, ಕೆನಾಡ ಮತ್ತಿತರ ರಾಷ್ಟ್ರಗಳಲ್ಲಿ ಉತ್ತಮ ಕಟಾವಿನ ವರದಿಗಳಾಗಿದ್ದು ಅಲ್ಲಿಂದ ಮುಂದಿನ ದಿನಗಳಲ್ಲಿ ಭಾರತೀಯ ಬಂದರುಗಳಿಗೆ ಬೇಳೆಕಾಳಿನ ದಾಸ್ತಾನು ಬಂದು ಮುಂದಿನೆರಡು ವಾರಗಳಲ್ಲಿ ದರ ಇಳಿಕೆಯಾಗಬಹುದೆಂದು ಅವರು ಹೇಳಿದ್ದಾರೆನ್ನಲಾಗಿದೆ.

ಹಿಂದಿನೆರಡು ವರ್ಷಗಳಲ್ಲಿ ಮಳೆ ಕಡಿಮೆಯಾಗಿ ಹಾಗೂ 2014-15ರ ರಾಬಿ ಬೆಳೆಗೆ ಅಕಾಲಿಕ ಮತ್ತು ಬಿರುಗಾಳಿ ಮಳೆಯಿಂದ ಹಾನಿಯಾಗಿ ಬೇಳೆಕಾಳು ಉತ್ಪಾದನೆ ಕುಸಿತ ಕಂಡಿತ್ತು 2013-14ರಲ್ಲಿ 192.5ಲಕ್ಷ ಟನ್ ಉತ್ಪಾದನೆಯಾಗಿದ್ದ ಬೇಳೆಕಾಳು 2014-15ಕ್ಕೆ 172ಲಕ್ಷ ಟನ್‌ಗಳಿಗೆ ಕುಸಿತವಾಗಿ 20ಲಕ್ಷ ಟನ್ ಉತ್ಪಾದನೆ ಇಳಿಕೆಯಾಗಿದೆಯೆನ್ನಲಾಗಿದೆ. 2015ರ ಖಾರಿಫ್ ಬೆಳೆಯಲ್ಲಿ 70.50ಲಕ್ಷ ಟನ್ ಉತ್ಪಾದಿಸುವ ಗುರಿಗೆದುರಾಗಿ 55.60 ಟನ್ ಉತ್ಪಾದನೆಯಾಗಬಹುದೆನ್ನಲಾಗಿದ್ದು 15ಲಕ್ಷ ಟನ್ ಇಳಿಕೆಯಾಗಲಿದೆಯೆನ್ನಲಾಗಿದೆ. ಮಳೆಕಡಿಮೆಯಾಗಿ ಮಣ್ಣಿನ ತೇವಾಂಶ ಕಡಿಮೆಯಾಗಿರುವುದರಿಂದ ಉತ್ತಮ ರಾಬಿ ಬೆಳೆಗೆ ಪೂರಕ ಪರಿಸ್ಥಿತಿಯಿಲ್ಲವೆನ್ನಲಾಗಿದೆ. 2014-15ರ ಉತ್ಪಾದನೆ ಕುಂಠಿತವಾಗುವುದರೊಂದಿಗೆ ಪ್ರಮುಖ ಬೇಳೆಕಾಳು ಬೆಳೆಯುವ ಇತರ ರಾಷ್ಟ್ರಗಳಾದ ಕೆನಡಾ, ಮ್ಯಾನ್ಮಾರ್ ಮತ್ತು ಆಫ್ರಿಕಾಗಳಲ್ಲಿನ ಬೆಳೆ ನಷ್ಟ ಆಂತರಿಕ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಬೇಳೆಕಾಳು ಕೊರತೆ ಕಾಡಿದೆ. ಇದರಿಂದ ಭಾರತ ಮತ್ತು ಜಾಗತಿಕವಾಗಿ ಬೇಳೆಕಾಳು ಹಣದುಬ್ಬರ ಕಂಡಿದೆ. ಪೂರೈಕೆ ಕೊರತೆಯಿಂದ ತೊಗರಿ ಮತ್ತು ಉದ್ದು ದರಗಳು ವಿಪರೀತ ಹೆಚ್ಚಳ ಕಂಡಿದೆ. ಆದರೂ ಹಳದಿ ಬಟಾಣಿ, ಕಡ್ಲೆ ಮತ್ತು ಮಸೂರು ಮುಂತಾದ ಬೇಳೆಕಾಳುಗಳು ಖರೀದಿಯೋಗ್ಯ ದರದಲ್ಲಿ ಲಭಿಸುತ್ತಿದೆ. IPGA ಸರಕಾರದೊಂದಿಗೆ ಹಾಗೂ ಸಂಶೋಧನಾ ಕೇಂದ್ರಗಳೊಂದಿಗೆ ಬೇಳೆಕಾಳು ಉತ್ಪಾದನೆ ಹಾಗೂ ಇಳುವರಿ ಹೆಚ್ಚುಸುವಲ್ಲಿ ಶ್ರಮಿಸುತ್ತಿದೆ. ಭಾರತ ಬೇಳೆಕಾಳು ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ನಿರ್ದಿಷ್ಟ ಯೋಜನೆಯ ಅವಶ್ಯಕತೆಯಿದ್ದು IPGA ಈ ಯೋಜನೆ ರೂಪಿಸುವಲ್ಲಿ ಸರಕಾರಕ್ಕೆ ಪೂರ್ಣ ಸಹಕಾರ ನೀಡಲಿದೆಯೆಂದು ಹೇಳಿಕೊಂಡಿದ್ದಾರೆ. ಜನಸಂಖ್ಯಾ ಹೆಚ್ಚಳ, ಮಧ್ಯಮ ವರ್ಗದ ಆದಾಯದ ಹೆಚ್ಚಳದಿಂದಾಗಿ ಬೇಳೆಕಾಳು ಬೇಡಿಕೆ ಕೆಲವು ವರ್ಷಗಳಿಂದ ಸ್ಥಿರವಾಗಿ ಹೆಚ್ಚಳವಾಗುತ್ತಿದೆಯೆಂದು IPGA ಹೇಳಿದೆ. ಹಿಂದಿನ 37ವರ್ಷಗಳಿಂದ ಭಾರತ ಬೇಳೆಕಾಳು OGL ಅನ್ವಯ ಆಮದು ಮಾಡುತ್ತಿದ್ದು, 25ವರ್ಷದ ಹಿಂದೆ ಆಮದು 4 ಲಕ್ಷ ಟನ್ ಇದ್ದಿದ್ದು ಈ ವರ್ಷ 55 ಲಕ್ಷ ಟನ್‌ಗಳಿಗೆ ಏರಿಕೆಯಾಗುವ ನಿರೀಕ್ಷೆಯಿದೆಯೆಂದು IPGA ಹೇಳಿದೆ. ಜಾಗತಿಕ ಬೇಳೆಕಾಳು ಉತ್ಪಾದಕರಿಗೆ ಭಾರತ ಪ್ರಮುಖ ಮಾರುಕಟ್ಟೆಯಾಗಿದ್ದು, ಆಮದು ಮಾಡಲು ಸಾಕಷ್ಟು ದಾಸ್ತಾನಿದ್ದು, ಮುಂದಿನ ಕೆಲವು ದಿವಸಗಳಲ್ಲಿ ಈಗಿನ ಪರಿಸ್ಥಿತಿ ಬದಲಾಗಬಹುದೆಂದು ಗ್ಲೋಬಲ್ ಪಲ್ಸಸ್ ಕನ್‌ಫೆಡರೇಶನ್ ಅಧ್ಯಕ್ಷ ಹುಸೈನ್ ಆರ್ಶಾನ್ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡುತ್ತಾ ಹೇಳಿದ್ದಾರೆನ್ನಲಾಗಿದೆ.